# ಶೀಲದಲ್ಲಿ ನೆಲೆಸುವುದು

ಡಿಸೆಂಬರ್ 6. ಬಾಬಾಸಾಹೇಬರ ಪರಿನಿರ್ವಾಣ ದಿನ. ಸಹಜವಾಗಿಯೆ ಅವರನ್ನೆ ಕುರಿತು ಬರೆಯಲು ಮನಸ್ಸಾಗುತ್ತಿದೆ. ಅವರು ಮಾಡಿದ ಅತ್ಯುತ್ತಮ ಭಾಷಣವೊಂದರ ಪ್ರತಿ ನನ್ನ ಮುಂದಿದೆ. ಪ್ರಾಯಶಃ ಅವರೇ ತಮ್ಮ ಆತ್ಮಕಥೆಯನ್ನು ಬರೆದಿದ್ದರೆ ಏನೆಲ್ಲಾ ಕೌತುಕಗಳಿರುತ್ತಿದ್ದವೊ ಹೇಳಲು ಕಷ್ಟ. ಆದರೆ ಬೆಳಕಿಗೆ ಬಾರದ ಅನೇಕ ಮಹತ್ವದ ಸಂಗತಿಗಳು ಮರೆಯಾಗಿರುವುದಂತೂ ಸ್ಪಷ್ಟ.

ಶೀಲವನ್ನು ಸಂಪಾದನೆ ಮಾಡುವುದು ಕಷ್ಟ. ಸಂಪಾದಿಸಿದ ಮೇಲೆ ಅದನ್ನು ಕಾಪಾಡಿಕೊಳ್ಳುವುದು ಇನ್ನೂ ಕಷ್ಟ. ಇತಿಹಾಸದಲ್ಲಿ ಆಗಿಹೋಗಿರುವ ರಾಜಮಹಾರಾಜರು, ಸಾಧು ಸಂತರು, ವಿಜ್ಞಾನಿಗಳು, ರಾಜಕೀಯ ಮುತ್ಸದ್ದಿಗಳು, ಖ್ಯಾತನಾಮರಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಸಮಾಜವನ್ನು ಮುನ್ನಡೆಸಿದವರು ತಮ್ಮ ಜೀವಮಾನದಲ್ಲಿ ಮನುಷ್ಯ ಸಹಜವಾದ ವಾಸನೆಗಳಿಗೆ ಸ್ಪಂದಿಸಿಯೆ ಇರುತ್ತಾರೆ, ಅದೇನು ತಪ್ಪೆನಿಸುವುದಿಲ್ಲ. ಪಾಪನಿವೇದನೆಯ ಮೂಲಕವೇ ಸತ್ಯಾನ್ವೇಷಣೆಗೆ ಹೊರಟು ಮಹಾತ್ಮರಾದ ಗಾಂಧಿ ನಮ್ಮ ಕಣ್ಣಮುಂದೆಯೇ ಇದ್ದಾರೆ. ಕಾವಿಯನ್ನು ಧರಿಸಿಯೂ ಸನ್ಯಾಸತ್ವದ ಅಂಕೆಮೀರಿ ಪಾಪಪ್ರಜ್ಞೆಯನ್ನು ಅಂಟಿಸಿಕೊಳ್ಳದೆ ಮುಕ್ತವಾಗಿ ಮಾಂಸಾಹಾರಾದಿ ಭಕ್ಷ್ಯಗಳನ್ನು ಸವಿಯುತ್ತಿದ್ದ ಸ್ವಾಮಿ ವಿವೇಕಾನಂದರು ಉದಾಹರಿಸಲು ಸಿಗುತ್ತಾರೆ. ಆದರೆ ಅತ್ಯಾಶ್ಚರ್ಯಕರ ವಿಷಯವೇನೆಂದರೆ ಬಾಬಾಸಾಹೇಬರ ಬದುಕಿನಲ್ಲಿ, ಬಾಲ್ಯವೂ ಸೇರಿದಂತೆ ಎಲ್ಲಿಯೂ ಒಂದು ನೇತ್ಯಾತ್ಮಕ ಅಥವಾ ಬಾಬಾಸಾಹೇಬರು ತಾವೇ ವಿಷಾದಿಸಬಹುದಾದ ಒಂದು ಘಟನೆಯೂ ಕಂಡುಬರುವುದಿಲ್ಲ. ಅದೊಂದು ಅಪರೂಪದ ಆತ್ಮಸಂಕಥನ.

'ನನ್ನ ಸ್ವಾರ್ಥಕ್ಕಾಗಿ ನಾನು ಎಂದೂ ಕಳ್ಳತನ ಮಾಡಲಿಲ್ಲ, ಮೋಸ ಮಾಡಲಿಲ್ಲ, ಪಾಪ ಎಸಗಲಿಲ್ಲ. ನನಗೆ ನೆನಪಿರುವಂತೆ ಇಂತಹ ಕೆಟ್ಟ ಕೆಲಸಗಳನ್ನು ನಾನು ಎಂದೂ ಮಾಡಲೇ ಇಲ್ಲ. ನನಗೆ ಹೆಮ್ಮೆ ಎನಿಸುತ್ತದೆ. ಇಂಗ್ಲೆಂಡಿಗೆ ಹಲವಾರು ಬಾರಿ ಭೇಟಿ ಕೊಟ್ಟಿದ್ದೇನೆ. ನಾನು ಮದ್ಯ ಸೇವಿಸಿಲ್ಲ, ಸಿಗರೇಟು ಸೇದಲಿಲ್ಲ. ನನಗೆ ಯಾವದೇ ದುಶ್ಚಟಗಳು ಇಲ್ಲ. ನಾನು ಅತ್ಯಂತ ಪ್ರೀತಿಸುವ ವಸ್ತುಗಳು ಎಂದರೆ ಒಂದು ಪುಸ್ತಕ, ಇನ್ನೊಂದು ಬಟ್ಟೆ. ಶೀಲವನ್ನು ಕಾಪಾಡಿಕೊಳ್ಳುವುದು ಒಂದು ದೊಡ್ಡ ಸಾಧನೆ. ಅದನ್ನು ನಾನು ಸಾಧಿಸಿದ್ದೇನೆ' ದಿ. 28.10.1954 ರಂದು ಬಾಂಬೆಯ ಪುರಂದರೆ ಕ್ರೀಡಾಂಗಣದಲ್ಲಿ ಬಾಬಾಸಾಹೇಬರಿಗೆ 60 ವರ್ಷಗಳು ತುಂಬಿದಾಗ ಅಭಿಮಾನಿಗಳು ಜನ್ಮದಿನೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಹೇಳಿದ ಮಾತುಗಳಿವು. ಒಬ್ಬ ವ್ಯಕ್ತಿ ಅಚಲ ಆತ್ಮವಿಶ್ವಾಸದೊಂದಿಗೆ ಇಂತಹ ಮಾತುಗಳನ್ನು ಹೇಳುತ್ತಾರೆಂದರೆ ಅದಕ್ಕೆ ಕಾರಣ, ತಮ್ಮ ಜೀವನಪೂರ್ತಿ ಕಾಪಿಟ್ಟುಕೊಂಡು ಬಂದ ನೈತಿಕತೆ ಮತ್ತು ಅದರ ರಕ್ಷಕನಂತೆ ಇದ್ದ ಅವರ ದೃಢಸಂಕಲ್ಪ. ಇಂತಹ ನಿಷ್ಕಳಂಕ ವ್ಯಕ್ತಿತ್ವಕ್ಕೊಂದು ದಿವ್ಯ ನಮಸ್ಕಾರ.

ಬಾಬಾಸಾಹೇಬರು ದೇವರನ್ನು ನಂಬಲಿಲ್ಲ. ಅದೇ ಭಾಷಣದಲ್ಲಿ 'ನನಗೆ ಮೂವರು ಗುರುಗಳು ಮತ್ತು ಮೂವರು ದೇವತೆಗಳಿದ್ದಾರೆ' ಎಂದು ಹೇಳುತ್ತಾರೆ. ಬುದ್ಧ, ಕಬೀರ ಮತ್ತು ಜ್ಯೋತಿಬಾ ಫುಲೆ ಮೂವರು ಗುರುಗಳು. ಅವರು ಹತ್ತನೇ ಇಯತ್ತೆಯಿಂದ ತೇರ್ಗಡೆ ಹೊಂದಿದಾಗ ನೆರೆಹೊರೆಯವರು ಸನ್ಮಾನ ಮಾಡುತ್ತಾರೆ. ಆ ವೇಳೆ ದಾದಾ ಕೇಲುಸ್ಕರ್ ಬುದ್ಧನ ಜೀವನ ಚರಿತ್ರೆಯ ಪುಸ್ತಕವನ್ನು ಬಹುಮಾನವಾಗಿ ಕೊಡುತ್ತಾರೆ. ಅದು ಅಂಬೇಡ್ಕರರ ಜೀವನದ ಮಹತ್ವದ ತಿರುವು. ತಂದೆ ಕಬೀರರ ಅನುಯಾಯಿ. ಕಬೀರರ ಒಂದು ಪದ್ಯದಲ್ಲಿ 'ಮನುಷ್ಯತ್ವವನ್ನು ತಲುಪುವುದೇ ಕಠಿಣವಾಗಿರುವಾಗ ಮಹಾತ್ಮನಾಗುವುದು ಹೇಗೆ ಸಾಧ್ಯ' ಎಂದು ಬರುತ್ತದೆ. ಇದು ಕಾರಣ, ಅಂಬೇಡ್ಕರ್ ಮನುಷ್ಯತ್ವ ಗಳಿಸುವ ನಿರಂತರ ಕಾಯಕದಲ್ಲಿ ತೊಡಗಿಕೊಂಡರು. (ಗಾಂಧಿಯವರನ್ನು ಮಹಾತ್ಮ ಎಂದು ಕರೆಯಲು ಒಪ್ಪದಿರುವುದಕ್ಕೆ ಇದೂ ಒಂದು ಕಾರಣ). ಜ್ಯೋತಿಬಾ ಫುಲೆ ಎಲ್ಲ ಬ್ರಾಹ್ಮಣೇತರ ಜಾತಿಗಳ ಗುರುವಾಗಿದ್ದರು. ಶೋಷಿತ ಜನಾಂಗಕ್ಕೆ ಮಾನವತೆಯ ಪಾಠ ಹೇಳಿಕೊಟ್ಟರು. ಆದ್ದರಿಂದ ಈ ಮೂವರು ನನ್ನ ಗುರುಗಳು ಎಂದು ಒಪ್ಪಿಕೊಳ್ಳಲು ನೀಡಿರುವ ಸ್ವಸಮರ್ಥನೆ ಸಮರ್ಪಕವಾಗಿದೆ.

ಮತ್ತೆ ಜ್ಞಾನ, ಆತ್ಮಗೌರವ ಮತ್ತು ಶೀಲ ಇವೇ ಆ ಮೂವರು ದೇವತೆಗಳು. ಬುದ್ಧನ ಜೀವನ ಚರಿತ್ರೆಯನ್ನು ಓದಿದ ಅವರಿಗೆ ಜ್ಞಾನವನ್ನು ಸಂಪಾದಿಸಬೇಕು ಎಂಬ ಹಟ ಅಂಟಿಕೊಳ್ಳುತ್ತದೆ. 13–14 ವಯಸ್ಸಿನವರೆಗೂ ಮೈಮೇಲೆ ಬಟ್ಟೆ ಧರಿಸದೆ ಕೇವಲ ಒಂದು ಲಂಗೋಟಿಯಲ್ಲಿ ಇರುತ್ತಿದ್ದ, ಮನೆಮನೆಗೆ ಹೋಗಿ ಗೃಹಿಣಿಯರನ್ನು ಸೌದೆ ಸೀಳುವ ಕೆಲಸವಿದ್ದರೆ ಕೊಡಿ ಎಂದು ಕೇಳುತ್ತಿದ್ದ, ಶಿಕ್ಷಣದಲ್ಲಿ ಅಷ್ಟೇನು ಆಸಕ್ತಿಯಿಲ್ಲದೆ ಆರು ತಿಂಗಳು ಮಾಲಿ ಕೆಲಸವನ್ನು ಮಾಡುತ್ತಿದ್ದ ಒಬ್ಬ ಬಾಲಕನಿಗೆ ಈ ಪರಿಯ ಜ್ಞಾನದ ಗೀಳು ಹತ್ತಿಕೊಳ್ಳುವುದು ಸೋಜಿಗವೇ ಸರಿ. 'ದೇವರಿಗೆ ಹರಕೆ ಹೊರುವುದರಿಂದ ಮಕ್ಕಳಾಗುವುದಾದರೆ ನಿಮಗೆ ಗಂಡಂದಿರು ಏಕೆ ಬೇಕು?' ಎಂದ ಸಂತ ತುಕಾರಾಮರ ಮಾತು ವೈಚಾರಿಕತೆಯ ಕಿಡಿ ಹೊತ್ತಿಸುತ್ತದೆ. 'ದಿಲ್ಲಿಯ ನನ್ನ ಮನೆಯಲ್ಲಿ ಒಟ್ಟು ಇಪ್ಪತ್ತು ಸಾವಿರ ಪುಸ್ತಕಗಳಿವೆ. ಇಷ್ಟು ಪುಸ್ತಕಗಳನ್ನು ಹೊಂದಿದ ಯಾರಾದರೂ ಬ್ರಾಹ್ಮಣ ಇದ್ದಾನೆಯೆ' ಎಂದು ಧಾರ್ಷ್ಟ್ಯದಿಂದಲೇ ಕೇಳುವಷ್ಟು ಎತ್ತರಕ್ಕೆ ಬಾಬಾಸಾಹೇಬರು ಬೆಳೆಯುತ್ತಾರೆ.

ಆತ್ಮಗೌರವ ಅವರ ಎರಡನೆಯ ದೇವತೆ. ಅಂಬೇಡ್ಕರ್ ಸರ್ಕಾರಿ ನೌಕರಿಯನ್ನು ಎಂದೂ ಇಷ್ಟಪಡಲಿಲ್ಲ. 'ನಾನು ನನ್ನ ಜನಗಳ ಸೇವೆ ಮಾಡಬೇಕು' ಎನ್ನುವುದೇ ಅವರ ಪರಮ ಗುರಿಯಾಗಿತ್ತು. 'ಬಾಡಿಗೆ ಕೋಣೆಯಲ್ಲಿ ಗುಗ್ಗರಿ ತಿಂದು ಬದುಕಿದ್ದೇನೆ. ಆದರೆ ನನ್ನ ಜನಗಳ ಸೇವೆಯನ್ನು ಮಾತ್ರ ತೊರೆಯಲಿಲ್ಲ' ಎಂದು ಹೇಳುತ್ತಾರೆ. 'ಬಹಿಷ್ಕೃತ ಭಾರತ'ದ ಸಂಪಾದಕರಾಗಿದ್ದಾಗ ಬಾಲಗಂಗಾಧರ ತಿಲಕರ 'ಕೇಸರಿ' ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಲು ಕೋರಿ ಮೂರು ರೂಪಾಯಿಯ ಬಿಲ್ಲನ್ನು ಲಗತ್ತಿಸಿ ಕಳಿಸಿದ್ದರು. ಆದರೂ ಪ್ರಕಟಿಸಲಿಲ್ಲವಂತೆ. ಮಹಾಡ್ ಸತ್ಯಾಗ್ರಹ ಮತ್ತು ಕಾಳಾರಾಮ್ ದೇವಸ್ಥಾನ ಪ್ರವೇಶ ಚಳವಳಿಗಳಲ್ಲಿ ಯಾವ ವರದಿಗಾರನೂ ಹತ್ತಿರ ಬರಲಿಲ್ಲ, ಬದಲಾಗಿ ಇವರ ಮೇಲೆ ವ್ಯಂಗ್ಯಚಿತ್ರಗಳನ್ನು ಪ್ರಕಟಿಸುತ್ತಿದ್ದರು. ಅವಮಾನಗಳು ಎದುರಾದಾಗ ತಾವಾಗೇ ದೂರ ಸರಿಯುತ್ತಿದ್ದರು. ಯಾರಿಗೂ ಯಾವ ಕಾರಣಕ್ಕೂ ಶರಣಾಗತರಾಗಿರಬಾರದು ಎಂಬುದು ಅವರ ನಿಲುವಾಗಿತ್ತು.

ಮೂರನೆಯ ದೇವತೆ ಶೀಲ. ಮೇಲೆ ಹೇಳಿದಂತೆ ಆಜೀವ ಪರ್ಯಂತ ಬಾಬಾಸಾಹೇಬರು ಬುದ್ಧ ಹೇಳಿದ ಪಂಚಶೀಲದಲ್ಲಿ ಪ್ರತಿಷ್ಠಾಪಿತರಾಗಿದ್ದರು. ಬೋಧಿಸತ್ವರಾದರು. ಶೀಲವಿಲ್ಲದಿದ್ದರೆ ದೇವರು ಸಹ ದುಃಖಕ್ಕೀಡಾಗುತ್ತಾನೆ ಎಂಬುದನ್ನು ನಮ್ಮ ಅನೇಕ ಪುರಾಣ ಕಥನಗಳು ತೋರಿಸಿಕೊಟ್ಟಿವೆ. ಅಂಬೇಡ್ಕರ್ ಕೇವಲ ತಮ್ಮ ಜನಗಳಿಗಾಗಿ ಹೋರಾಡಲಿಲ್ಲ. ಮಾನವ ಮೌಲ್ಯಗಳ ಪುನರುತ್ಥಾನಕ್ಕಾಗಿ ಹೋರಾಡಿದರು. ಅವರೊಬ್ಬ ಧರ್ಮದರ್ಶಿ, ನ್ಯಾಯದರ್ಶಿ, ದೈವತ್ವಕ್ಕೇರಿದ ಹೋಲಿಕೆಯಿಲ್ಲದ ಮನುಷ್ಯ. ಆದ್ದರಿಂದಲೇ 'ದೇವರೂ ಸಹ ನನಗೆ ಸಾಟಿ ಇಲ್ಲ' ಎಂದು ಅವರು ತಿಳಿದಿದ್ದರು. ಇಂತಹ ದಾರ್ಶನಿಕ ಪ್ರಾತಃಸ್ಮರಣೀಯರು, ಪೂಜಾರ್ಹರು ಆಗಿರುವುದರಲ್ಲಿ ಆಶ್ಚರ್ಯವೇನಿದೆ?

■ ಮೂಚಿ

## ಮಾತೇ ಮುತ್ತು

★ ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದು ಬೀಳುವ ಭಯವಿರದು. ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ.

-ಕುವೆಂಪು

★ ನನ್ನ ಅಜ್ಜ ಯಾರೆಂದು ನನಗೆ ಗೊತ್ತಿಲ್ಲ; ಆದರೆ ಆತನ ಮೊಮ್ಮಗ ಏನಾಗಬೇಕೆಂದು ನನಗೆ ಗೊತ್ತಿದೆ.

-ಅಬ್ರಹಾಂ ಲಿಂಕನ್

★ ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ. ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳಬೇಡ.

-ಸರ್ವಜ್ಞ

★ ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ನೀವು ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.

-ಜೋಯೆಲ್ ಆಸ್ಟಿನ್

★ ಜಾತಿಯನ್ನು ಕೇಳಬೇಡಿ, ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂ ಬೇಡಿ.

-ನಾರಾಯಣ ಗುರು

★ ಪ್ರೀತಿಯಲ್ಲಿ ಬೀಳುವುದಕ್ಕೆ ಗುರುತ್ವಾಕರ್ಷಣ ಶಕ್ತಿಯನ್ನು ಬೈದು ಪ್ರಯೋಜನವಿಲ್ಲ. ಅದೊಂದು ಜೈವಿಕ ಕ್ರಿಯೆ; ಭೌತ ಮತ್ತು ರಸಾಯನಶಾಸ್ತ್ರಕ್ಕೆ ಅಲ್ಲಿ ಸ್ಥಳವಿಲ್ಲ.

-ಆಲ್ಬರ್ಟ್ ಐನ್‌ಸ್ಟೀನ್